ಹಕ್ಕಿ ಗಾಜಿನಿಂದಲೇ ಒಳಗೆಲ್ಲ ಇಣುಕಿ ಇಣುಕಿ ನೋಡಿದಾಗಲೆಲ್ಲ ರಮಾಳ ಸಂಭ್ರಮ ಹೇಳತೀರದು. ''ಇದ್ಯಾರು ಹೊಸ ಜನ ಅಂತ ತನಿಖೆ ಮಾಡುತ್ತಿದೆ'' ಎಂದವಳೇ, ''ನನ್ನನ್ನು ನೋಡಿ ಹಾರಿಹೋಗದೆ ನಾಲ್ಕೈದು ವಿಡಿಯೊ ತುಣುಕಾದರೂ ಮಾಡುವಷ್ಟು ಹೊತ್ತು ಇಲ್ಲಿ ಕುಳಿತಿದ್ದರೆ ಸಾಕು'' ಎಂದೂ ಸೇರಿಸಿದಳು ರಮಾ.

''ಇದೀಗ ಸ್ವಲ್ಪ ಹೊತ್ತಿನಲ್ಲಿ ಕ್ಯಾಟ್ ವಾಕ್ ಆರಂಭಿಸುತ್ತೆ'' ದೊಡ್ಡ ಹಕ್ಕಿತಜ್ಞನಂತೆ ನಾನು ಕಮೆಂಟರಿ ಆರಂಭಿಸಿದೆ. ''ಮತ್ತೆ ಟ್ರಾಫಿಕ್ ಪೊಲೀಸನನ್ನು ಅನುಸರಿಸಿ ಸಿಗ್ನಲಿನಲ್ಲಿ ಕಾಲೆತ್ತುತ್ತೆ. ನಡುನಡುವೆ ಆಗಾಗ ಯೋಗಾ ಪೋಸುಕೊಡುತ್ತೆ. ಕೊನೆಗೆ ಅಶೋಕ ಹೋಟೆಲಿನ ಬಳಿ ಹಾರಿ ಹೋಗುತ್ತೆ. ಸದ್ಯ ನಾಲ್ಕು ವಿಡಿಯೊ ಮಾಡು, ಅಷ್ಟು ಸಾಕು'' ಎಂದೆ. ರಮಾ ಏಕಾಗ್ರತೆಯಿಂದ ಮೊಬೈಲ್ ಅಲುಗಾಡದಂತೆ ಹಿಡಿದು ವಿಡಿಯೊ ಮಾಡುತ್ತಿದ್ದಳು. ವೀಕೆಂಡಿಗೆ ಎರಡು ದಿನ ರಜೆ ಮಾಡಿದ್ದಕ್ಕೆ ಸಿಟ್ಟಾಗದೆ ಇಂದೂ ಬಂದು ನನ್ನ ಮರ್ಯಾದೆ ಉಳಿಸಿದ ಹಕ್ಕಿಯ ಮೇಲೆ ನನಗೆ ಅಭಿಮಾನ ಉಕ್ಕಿ ಬಂದಿತ್ತು. ಹಕ್ಕಿ ರಮಾಳ ಎದುರು ಸ್ವಲ್ಪ ಹೆಚ್ಚೇ ಹಾವಭಾವ ಪ್ರದರ್ಶಿಸುತ್ತಿತ್ತು! ಅಶೋಕ ಹೋಟೆಲ್ ಸಮೀಪಿಸುತ್ತಿದ್ದಂತೆ, ''ಇನ್ನು ಐದು ನಿಮಿಷದಲ್ಲಿ ಯಾವ ಕ್ಷಣವಾದರೂ ಹಾರಿಹೋಗುತ್ತೆ'' ಎಂದೆ ನಾನು. ''ಸರಿ, ಅದೇ ಕಾಮೆಂಟ್ರಿ ಕೊಡ್ತೀನಿ'' ಎಂದ ರಮಾ ಪುನಃ ವಿಡಿಯೊ ಶುರು ಮಾಡಿ, ''ಸ್ನೇಹಿತರೇ ನಮ್ಮ ಸಹಪ್ರಯಾಣಿಕ ಹಕ್ಕಿಯ ಡೆಸ್ಟಿನೇಶನ್ ಅಶೋಕ ಹೋಟೆಲ್ ಹತ್ತಿರ ಬರುತ್ತಿದ್ದೇವೆ. ಇನ್ನು ಯಾವುದೇ ಕ್ಷಣದಲ್ಲಿ ಹಕ್ಕಿ ತಾನಾಗಿ ಹಾರಿಹೋಗುವುದನ್ನು ನೋಡಿ. ಇಷ್ಟು ಹೊತ್ತು ನಮ್ಮೊಂದಿಗಿದ್ದು ಹಕ್ಕಿಯ ವಿಶೇಷ ಪ್ರಯಾಣವನ್ನು ಅಸ್ವಾದಿಸಿದ ನಿಮಗೆಲ್ಲ ಧನ್ಯವಾದಗಳು. ವಿಡಿಯೊ ಇಷ್ಟವಾದರೆ ಕಮೆಂಟ್ ಹಾಕಿ ಮತ್ತು ಶೇರ್ ಮಾಡಿ'' ಅಂತ ಹೇಳಿ ಮುಗಿಸಿದಳು. ಅದನ್ನೇ ಕಾಯುತ್ತಿದ್ದಂತೆ ಹಕ್ಕಿ ಅಶೋಕ ಹೋಟೆಲಿನ ಬದಿಯ ರಸ್ತೆಯ ಬಳಿ ಹಾರಿ ಹೋಯಿತು. ''ವಾವ್... ದಿಸ್ ಈಸ್ ಗ್ರೇಟ್'' ಅನ್ನುತ್ತ ಕುಣಿದು ಕುಪ್ಪಳಿಸಿ ಚಪ್ಪಾಳೆ ಹೊಡೆದಳು ರಮಾ.

ರಮಾಳನ್ನು ಸ್ಕೂಲಿಗೆ ಬಸ್ ಸಿಗುವ ಮುಂದಿನ ಸ್ಟಾಪಿನಲ್ಲಿಳಿಸಿದ್ದೆ. ತಲೆತುಂಬಾ ನನ್ನ ಮರ್ಯಾದೆ ಉಳಿಸಿದ ಹಕ್ಕಿಯ ನೆನಪುಗಳು. ಮಧ್ಯಾಹ್ನ ಊಟದ ಬಿಡುವಿನಲ್ಲಿ ರಮಾಳ ಮೆಸೇಜು ಬಂತು. ಜೊತೆಗೆ ನಾಲ್ಕು ವಿಡಿಯೊಗಳು. ನಿಮ್ಮಮ್ಮನಿಗೆ ಆಗಲೇ ಕಳಿಸಿದ್ದೇನೆ ಎಂದು ಇನ್ನೊಂದು ಮೆಸೇಜು ಕೂಡ ಹಾಕಿದ್ದಳು. ಊಟ ಮುಗಿಯುವಷ್ಟರಲ್ಲಿ 'ನೈಸ್ ಬರ್ಡ್' ಅಮ್ಮನ ಮೆಸೇಜು. ಅಮ್ಮನ ಮೆಸೇಜು ಅಂದರೆ ಹಾಗೇ... ಒಂದು ಅಥವಾ ಎರಡು ಶಬ್ದಗಳು. ಟೈಪಿಂಗ್ ಅಂದರೆ ಆಕೆಗೆ ತಲೆನೋವು. ಆದರೆ, ಎಲ್ಲ ಮೆಸೇಜಿಗೂ ಕಮೆಂಟ್ ಹಾಕ್ತಾಳೆ. ಅಪ್ಪ ಆದರೆ ಎಲ್ಲ ಮೆಸೇಜಿಗೂ ಕಮೆಂಟ್ ಹಾಕಲ್ಲ. ಅಪರೂಪಕ್ಕೆ ಕಮೆಂಟ್ ಬರೆದರೆ ಅದೊಂದು ಸತ್ವಯುತವಾದ ಗಂಭೀರ ವಿಮರ್ಶೆಯೇ ಸರಿ!

ರಾತ್ರಿ ಮನೆಗೆ ಬಂದಾಗ ರಮಾ ಉಬ್ಬಿ ಹೋಗಿದ್ದಳು, ''ನಮ್ಮ ವಿಡಿಯೊ ವೈರಲ್ ಆಗಿದೆ. ನೀವು ಹೀರೊ ಆಗಿದ್ದೀರಾ. ನಾಲ್ಕುನೂರಕ್ಕೂ ಜಾಸ್ತಿ ಜನ ಲೈಕ್ ಮಾಡಿದ್ದಾರೆ. ಎಷ್ಟೋ ಜನ ಕಮೆಂಟ್ ಹಾಕಿದ್ದಾರೆ. ಅದಕ್ಕೂ ಹೆಚ್ಚು ಮಂದಿ ಶೇರ್ ಮಾಡಿದ್ದಾರೆ. ಮೂವತ್ತು ಮಂದಿ ನಿಮ್ಮೊಡನೆ ಕಾರಿನಲ್ಲಿ ಮುಂದೆ ಒಂದುದಿನ ಅವರೂ ಬರಬಹುದಾ ಅಂತ ಕೇಳಿದ್ದಾರೆ'' ಅಂದಳು.

''ಹೀರೊ ನಾನಲ್ಲ. ಆ ಹಕ್ಕಿ'' ಎಂದೆ ನಾನು. ''ಹಕ್ಕಿ ನಮಗೆ ಹೀರೊ... ನನಗೆ ನೀವು ಹೀರೊ. ನನ್ನ ಯಾವ ಫ್ರೆಂಡಿಗೂ ಫೇಸ್‌ಬುಕ್‌ನಲ್ಲಿ ಇಷ್ಟು ಕಮೆಂಟು ಬಂದದ್ದೇ ಇಲ್ಲ. ಇದು ರೆಕಾರ್ಡ್... ನಿಮ್ಮೊಂದಿಗೆ ಒಂದು ದಿನ ಕಾರಲ್ಲಿ ಕೂರುವ ಅವಕಾಶ ಸಿಗಬಹುದಾ ಅಂತ ಕೇಳಿದವರಿಗೆ ಏನು ಹೇಳಬೇಕು?'' ಅವಳ ಪ್ರಶ್ನೆಯಲ್ಲಿ ದಯವಿಟ್ಟು ಒಪ್ಪಿಕೊಳ್ಳಿ ಅನ್ನುವ ವಿನಮ್ರತೆ ಸೇರಿಕೊಂಡಿತ್ತು.

''ಸರಿ, ಊಟಕ್ಕೇನು ಮಾಡಿದ್ದೀ?'' ಉತ್ಸಾಹ ತೋರಿಸದೆ ಕೇಳಿದೆ ನಾನು. ''ನೀವು ಚೇಂಜ್